ಆ) ದಕ್ಷಿಣ ಕನ್ನಡ ಜಿಲ್ಲೆ ಬೆಳ್ತಂಗಡಿ ತಾಲ್ಲೂಕಿನ ಧರ್ಮಸ್ಥಳ, ಸಿಸಿಲ, (ಮತ್ಸ್ಯಧಾಮ) ಗಳನ್ನು ಪ್ರವಾಸಿ ಕೇಂದ್ರಗಳೆಂದು ಗುರುತಿಸಲಾಗಿದೆ.

ಅ) ಸದ್ಯಕ್ಕೆ ಯಾವುದೇ ಪ್ರಸ್ತಾವನೆಗಳು ಇಲಾಖೆಯ ಮುಂದೆ ಇರುವುದಿಲ್ಲ.

ಪಶುಗಳ ಕೃತಕ ಗರ್ಭಧಾರಣೆ

1731 (2182) ಶ್ರೀ ಪಾಟೀಲ್ ಡಿ.ಆರ್.(ಗದಗ್): ಮಾನ್ಯ ಪಶುಸಂಗೋಪನಾ ಮತ್ತು ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೃತಕ ಗರ್ಭಧಾರಣೆ ಕಾರ್ಯಕ್ರಮದಡಿಯಲ್ಲಿ ಕಳೆದ ಮೂರು ವರ್ಷಗಳಲ್ಲಿ ಕೃತಕ ಗರ್ಭಧಾರಣೆ ಮಾಡಿಸಿದ ಪಶುಗಳೆಷ್ಟು;

ಆ) ಇದರಲ್ಲಿ ಗರ್ಭಧಾರಣೆ ಮಾಡಿದ ಪಶುಗಳೆಷ್ಟು;

ಇ) ಈ ಕೃತಕ ಗರ್ಭಧಾರಣೆಯ ಯಶಸ್ಸಿನ ಪ್ರಮಾಣವನ್ನು ಹೆಚ್ಚಿಸಲು ಸರ್ಕಾರ ಕೈಗೊಂಡ ಕ್ರಮಗಳೇನು;

ಈ) ನಮ್ಮ ರಾಜ್ಯದಲ್ಲಿ ಬಾಯ್‌ಫ್ ಸಂಸ್ಥೆ ಮೂರು ವರ್ಷಗಳಲ್ಲಿ ಗರ್ಭಧಾರಣೆ ಕೈಗೊಂಡ ಪಶುಗಳೆಷ್ಟು;

ಉ) ಈ ಸಂಸ್ಥೆಯಿಂದ ಯಶಸ್ಸಿನ ಪ್ರಮಾಣ ಏನು;

ಊ) ಅದರ ಪ್ರಯೋಗದ ಪ್ರತಿಫಲದಿಂದ ಸರ್ಕಾರ ಏನಾದರೂ ತನ್ನ ಕಾರ್ಯಕ್ರಮದಲ್ಲಿ ಬದಲಾವಣೆ ಮಾಡಲು ಯೋಜಿಸಿದೆಯೇ;

ಶ್ರೀ ಎ.ಕೃಷ್ಣಪ್ಪ (ಪಶುಸಂಗೋಪನೆ ಮತ್ತು ಸಕ್ಕರೆ ಸಚಿವರು).

ಅ)

ವರ್ಷ	ಕೃತಕ ಗರ್ಭಧಾರಣೆ ಮಾಡಿದ ರಾಸುಗಳ ಸಂಖ್ಯೆ
96-97	12,34,100
97-98	13,64,966
98-99	13,66,969
ಒಟ್ಟು	39,66,035

ಆ)

96-97	4,31,416
97-98	4,11,517
98-99	4,68,596
ಒಟ್ಟು	13,11,529

ಇ) 1. ವೀರ್ಯದ ಗುಣಮಟ್ಟವನ್ನು ಹೆಚ್ಚಿಸಲು ಪ್ರಯೋಗಶಾಲೆಗಳನ್ನು ಆತ್ಯಾಧುನಿಕ ಸಂಸ್ಕರಣಾ

ಉಪಕರಣಗಳಿಂದ ಬಲಪಡಿಸಲಾಗಿದೆ.

2. ವೀರ್ಯ ಉತ್ಪಾದನೆಗೆ ಬಳಸುವ ಹೋರಿ ಕೋಣಗಳು ಯಾವುದೇ ಅನುವಂಶಿಕ ಕಾಯಿಲೆಗಳನ್ನು ಹೊಂದಿಲ್ಲದಿರುವುದನ್ನು ಖಾತ್ರಿಪಡಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

3. ರಾಜ್ಯದ ಎಲ್ಲಾ ಪಶುವೈದ್ಯಕೀಯ ಸಂಸ್ಥೆಗಳಲ್ಲೂ ದ್ರವಸಾರಜನಕ ಪೂರೈಕೆಯನ್ನು ತೃಪ್ತಿಕರವಾಗಿರುವಂತೆ ಕಾಯ್ದುಕೊಂಡು ಘನೀಕೃತ ವೀರ್ಯವನ್ನು ಸರಬರಾಜು ಮಾಡಲಾಗುತ್ತಿದೆ.

4. ಕೃತಕ ಗರ್ಭಧಾರಣ ಕಾರ್ಯಕರ್ತರುಗಳಿಗೆ ಆಗಿಂದಾಗ್ಗೆ ಪುನಃಶ್ಚೇತನ ತರಬೇತಿ ನೀಡಲಾಗುತ್ತಿದೆ.

5. ರೈತರ ಮನೆ ಬಾಗಿಲಿನಲ್ಲೇ ಕೃತಕ ಗರ್ಭಧಾರಣೆ ಮಾಡುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳ ಪರಿಶೀಲಿಸಲಾಗುತ್ತಿದೆ.

ಈ)

ವರ್ಷ	ಕೃತಕ ಗರ್ಭಧಾರಣೆ ಮಾಡಿದ ರಾಸುಗಳ ಸಂಖ್ಯೆ
96-97	59641
97-98	60731
98-99	50842
ಒಟ್ಟು	171214

ಉ) ಶೇಕಡಾ 58.5

ಊ) ಅವಶ್ಯಕತೆ ಇರುವುದಿಲ್ಲ

ರಾಜ್ಯದಲ್ಲಿರುವ ಅರಣ್ಯ ಪ್ರದೇಶದಲ್ಲಿ ಗಿಡಮರಗಳನ್ನು ಬೆಳೆಸದೇ ಇರುವ ಪ್ರದೇಶ

1734 (2184) ಶ್ರೀ ಡಿ.ಆರ್.ಪಾಟೀಲ್ (ಗದಗ್): ಮಾನ್ಯ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ;

ಅ) ನಮ್ಮ ರಾಜ್ಯದಲ್ಲಿ ಇರುವ ಅರಣ್ಯ ಪ್ರದೇಶವೆಷ್ಟು;

ಆ) ಇದರಲ್ಲಿ ಗಿಡ ಮರಗಳಿಲ್ಲದ ಪ್ರದೇಶವೆಷ್ಟು;

ಇ) ಗಿಡ ಮರಗಳನ್ನು ಬೆಳೆಸುವ ಷರತ್ತಿನೊಂದಿಗೆ ಆ ಗ್ರಾಮದಲ್ಲಿರುವ ಭೂ ಹೀನರಿಗೆ ಹಾಗೂ ಗ್ರಾಮಸ್ಥರಿಗೆ ಈ ಭೂಮಿ ಕೊಡುವುದರಲ್ಲಿ ಇರುವ ತೊಂದರೆ ಏನು;

ಈ) ಬೇರೆ ಬೇರೆ ಜಾತಿ ಗಿಡಗಳು ಪ್ರತಿನಿತ್ಯ ಅವು ಉಪಯೋಗಿಸುವ ಆಮ್ಲಜನಕ ಹಾಗೂ ಅಂಗಾರಾಮ್ಲ ವಾಯುವಿನ ಪ್ರಮಾಣ ಎಷ್ಟು; ಗಿಡ ಮರಗಳ ಜಾತಿಯ ಆಧಾರದ ಮೇಲೆ ವಿವರ ಒದಗಿಸುವುದು?

ಶ್ರೀ ಕೆ.ಎಚ್.ರಂಗನಾಥ್ (ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು).